# ನಮಗೆ ಬೇಕಿರುವುದು ತಿರುಗಾಟ ಬರೀ ನೋಟವಲ್ಲ



• ವಿಶ್ವೇಶ್ವರ ಭಟ್

**ತಿರುಗಾಡುವವನು ಅರ್ಥಮಾಡಿಕೊಳ್ಳುತ್ತಾ ಹೋಗುತ್ತಾನೆ. ಅವನಿಗೆ ನೋಡಿದ್ದೆಲ್ಲ ಹೊಸತು, ಬೆರಗು. ಎಲ್ಲವೂ ಕುತೂಹಲ ಮೂಡಿಸುತ್ತದೆ. ಆತ ಪ್ರತಿ ದೇಶಕ್ಕೆ ಹೋದಾಗಲೂ ಸುತ್ತುತ್ತಾನೆ. ಅದರಿಂದ ಅನುಭವ ಪಡೆಯುತ್ತಾನೆ. ವಾಪಸ್ ಬಂದ ಬಳಿಕ ಅವನಿಗೆ ಹೇಳಲು ಹಲವು ಕತೆಗಳಿರುತ್ತವೆ...**

Twenty years from now you will be more disappointed by the things you didn't do than by the ones you did do.

**- Mark Twain**

ಸುಮಾರು ಮೂವತ್ತು ವರ್ಷಗಳ ಹಿಂದೆ, ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ವರ್ಷಾಂತ್ಯದಲ್ಲಿ ಪತ್ನಿಯೊಂದಿಗೆ ಕೊಡೈಕೆನಾಲ್‌ಗೆ ಒಂದು ವಾರ ವಿರಾಮ ಪ್ರವಾಸ ಹೋಗಿದ್ದರು. ಮುಖ್ಯಮಂತ್ರಿಯೊಬ್ಬರು ದಣಿವಾರಿಸಿಕೊಳ್ಳಲು ಆ ರೀತಿ ಪ್ರವಾಸ ಹೋಗಿದ್ದು ಹೊಸತು. ಪ್ರವಾಸಕ್ಕೆ ಹೋಗಿ ವಿಶ್ರಾಂತಿ ಪಡೆದುಕೊಂಡರೂ, ವಿಶ್ರಾಂತಿ ಪಡೆಯುವುದಕ್ಕಾಗಿ ಪ್ರವಾಸ ಹೋಗುತ್ತಿದ್ದೇನೆಂದು ಯಾರೂ ಹೇಳುತ್ತಿರಲಿಲ್ಲ. ಹೆಗಡೆಯವರು ವಿಶ್ರಾಂತಿಗಾಗಿ ಪ್ರವಾಸ ಹೋಗಿದ್ದು ದೊಡ್ಡ ವಿವಾದಕ್ಕೆ ಕಾರಣವಾಯಿತು. 'ಕೂಲಿ ಕಾರ್ಮಿಕರು, ರೈತರು ಇಪ್ಪತ್ತನಾಲ್ಕು ಗಂಟೆ ದುಡಿದರೂ ಅವರ ಹಸಿವು ನೀಗುವುದಿಲ್ಲ. ಹೀಗಿರುವಾಗ ರಾಜ್ಯದ ಮುಖ್ಯಮಂತ್ರಿಯಾದವರು ಆರಾಮಾಗಿ ವಿಶ್ರಾಂತಿ ಪಡೆಯುತ್ತಿದ್ದಾರೆ; ಊರು ಹೊತ್ತಿ ಉರಿಯುವಾಗ ರಾಜ ಪಿಟೀಲು ನುಡಿಸುತ್ತಿದ್ದನಂತೆ; ಜನರ ಕಷ್ಟ ಗೊತ್ತಿಲ್ಲದ ಮುಖ್ಯಮಂತ್ರಿ ತನ್ನ ಸುಖವನ್ನು ಮಾತ್ರ ನೋಡುತ್ತಿದ್ದಾರೆ; ಯಾರಿಗಿದೆ ಈ ಸುಖ, ಸರಕಾರಿ ಖರ್ಚಿನಲ್ಲಿ ಮೋಜು-ಮೇಜವಾನಿ ಎಂದು ಪ್ರತಿಪಕ್ಷ ನಾಯಕರು ಹೆಗಡೆಯವರನ್ನು ಟೀಕಿಸಿದ್ದೇ ಟೀಕಿಸಿದ್ದು. ಅದೇ ಕೊನೆ, ಹೆಗಡೆಯವರು ಅಧಿಕೃತವಾಗಿ ಘೋಷಿಸಿ ಪ್ರವಾಸ ಹೋಗಲಿಲ್ಲ.

ತಮ್ಮ ಪ್ರವಾಸವನ್ನು ಸಮರ್ಥಿಸಿಕೊಂಡು ಅಂದು ಹೆಗಡೆಯವರು ಹೇಳುತ್ತಿದ್ದರು-'ಅಮೆರಿಕದ ಅಧ್ಯಕ್ಷ ಪ್ರತಿವರ್ಷ ಹತ್ತು ದಿನ ಕುಟುಂಬ ಸಮೇತ ಪ್ರವಾಸ ಹೋಗುತ್ತಾರೆ. ಹಾಗೆ ಪ್ರವಾಸ ಹೋಗುವುದು ಒಳ್ಳೆಯದು. ಒಂದಷ್ಟು ಸಮಯ ದಣಿವು ಆರಿಸಿಕೊಳ್ಳಲು, ಯೋಚಿಸಲು, ಚಿಂತನೆ ನಡೆಸಲು ಇದು ಸಹಾಯಕ. ಇದರಿಂದ ಮತ್ತಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ'. ಆದರೆ ಹೆಗಡೆಯವರ ಈ ಸಮರ್ಥನೆ ರಾಜಕೀಯದ ಟೀಕೆಗಳ ಹೊಳೆಯಲ್ಲಿ ತೇಲಿ ಹೋಯಿತು.

ನರೇಂದ್ರ ಮೋದಿಯವರು ಪ್ರಧಾನಿಯಾದಂದಿನಿಂದ ಇಲ್ಲಿಯ ತನಕ ಒಂದೇ ಒಂದು ರಜೆ ತೆಗೆದುಕೊಂಡಿಲ್ಲ. ಭಾನುವಾರವೂ ಅವರು ವಿಶ್ರಾಂತಿ ಪಡೆಯುವುದಿಲ್ಲ. ಅನುಗಾಲವೂ ಕ್ರಿಯಾಶೀಲ. ಮೋದಿಯವರು ಒಂದು ದಿನ ಸಹ ಬಿಡುವಿಲ್ಲದೇ, ಹಗಲಿರುಳೆನ್ನದೇ ಅಹರ್ನಿಶಿ ದುಡಿಯುತ್ತಾರೆಂಬುದು 'ಮೋದಿ ಭಕ್ತ'ರಿಗೆ ಅಗ್ಗಳಿಕೆಯ ಮಾತು. ವರ್ಷದಲ್ಲಿ ಒಂದು-ಎರಡು ಸಲ ವಾರ, ಹತ್ತು ದಿನ ರಜೆ ಅಥವಾ ವಿಶ್ರಾಂತಿ ತೆಗೆದುಕೊಳ್ಳುವುದು ಅಪಥ್ಯವೇ. ನಾಳೆ ಮೋದಿಯವರೇನಾದರೂ ಟೀಕೆ, ಚರ್ಚೆಯನ್ನು ಹುಟ್ಟು ಹಾಕಬಹುದು. ಈ ಉಸಾಬರಿಯೇ ಬೇಡವೆಂದು, ರಜೆ ತೆಗೆದುಕೊಳ್ಳದಿರುವುದನ್ನೇ ಒಂದು 'ಹಿರಿಮೆ'ಯನ್ನಾಗಿ ಮಾಡಿಕೊಂಡಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಒಂದು ಸಲ ಕೇರಳದ ಕುಮರಕೋಮ್‌ಗೆ ಹಾಗೂ ಇನ್ನೊಂದು ಸಲ ಗೋವಾಕ್ಕೆ ಐದು ದಿನಗಳ ಕಾಲ ರಜಾ ಹೋಗಿದ್ದರು. ಈ ಅವಧಿಯಲ್ಲಿ ಅವರು ಎರಡು ಲೇಖನಗಳನ್ನು ಬರೆದಿದ್ದರು. ಕೆಲವು ಪುಸ್ತಕಗಳನ್ನು ಓದಿದ್ದಾಗಿಯೂ ಅವರು ಹೇಳಿದ್ದರು. ದೇಶದ ಪ್ರಧಾನಿ, ರಾಷ್ಟ್ರಪತಿಯದವರು ವರ್ಷದಲ್ಲಿ ಒಂದು ವಾರ ವಿರಮಿಸಬೇಕು. ಧೇನಿಸಬೇಕು, ಏಕಾಂತ ಅರಸಬೇಕು.